ತುಂಡು ಮಾಂಸವೂ ತನಗೆ ದಕ್ಕದು, ಇದಕ್ಕೊಂದು ಉಪಾಯ ಯೋಚಿಸಿ ಬರುವೆ' ಎಂದು ಹುಲಿ ಕಾಡೊಳಗೆ ಹೋಗುತ್ತಾ ತನಗೇ ತಾನು ಮಾತಾಡಿಕೊಂಡಿತು.

ಈಗ ಹುಲಿಗೆ ಎತ್ತುಗಳು ತಿವಿದಾಗ ಆದ ಗಾಯ ಮಾದಿದೆ. ಮತ್ತೆ ಮಂದೆಯತ್ತ ಬಂದಿದೆ. ಅದನ್ನು ನೋಡಿದ ಎತ್ತುಗಳು ತಾವೂ ಗುಟುರು ಹಾಕುತ್ತಾ ಮುಂದೆ ಬಂದವು. ಹುಲಿ ಕೂಡಲೇ 'ಬೇಡ, ಬೇಡ... ಕೋಪ ಬೇಡ... ನಾನು ನನಗಿಂತಲೂ ಶಕ್ತಿಶಾಲಿಗಳಾದ ನಿಮ್ಮ ಗೆಳೆತನ ಬಯಸಿ ಬಂದೆ, ನನ್ನ ಕೋರಿಕೆ ಮನ್ನಿಸಿ. ನನ್ನ ನಿಮ್ಮ ಗೆಳೆಯ ಮಾಡಿಕೊಳ್ಳಿ 'ಅಂತ ಬೇಡಿತು. ಎತ್ತುಗಳಿಗೆ ಅಹಂಕಾರ ಏರಿತು. 'ಆಯ್ತು ಸರಿ ನೀನೂ ನಮ್ಮ ಗೆಳೆಯ' ಎಂದು ಹುಲಿಗೆ ಅಲ್ಲಿ ಅಡ್ಡಾಡಲು ಬಿಟ್ಟವು ಮತ್ತು ಅದರೊಂದಿಗೆ ಆಟವಾಡುತ್ತಾ ಸಮಯ ಕಳೆಯಲು ಶುರುಮಾಡಿದವು.

ಕೆಲವು ಸಮಯ ಕಳೆದಿದೆ. ಹೀಗೇ ಆಟದ ಮಧ್ಯೆ ಒಂದಿನ ಹುಲಿ ರಾಮೆತ್ತುವಿನ ಹತ್ತಿರ ಕರೆದು ಕಿವಿಯಲ್ಲಿ ಏನೋ ಗುಟ್ಟು ಹೇಳುವಂತೆ ಪಿಸಪಿಸ ಎಂದು ಒಂದಷ್ಟು ಹೊತ್ತು ಬಾಯಿ ಅಲುಗಾಡಿಸುತ್ತಾ ಇದ್ದು ಕೊನೆಗೆ 'ಈಗ ನಾನು ಹೇಳಿದ್ದು ಶಾಮೆತ್ತಿಗೆ ಹೇಳಬೇಡ' ಎಂದು ಹೇಳಿ ಹೊರಟು ಹೋಯಿತು. ಶಾಮೆತ್ತು 'ಹುಲಿ ಅದೇನು ಹೇಳಿದ್ದು' ಎಂದು ಕೇಳಿದಾಗ 'ರಾಮೆತ್ತು ಏನೂ ಇಲ್ಲ ಕಣೋ, ಸುಮ್ಮನೆ ಪಿಸ ಪಿಸ ಅಂತು' ಅಂದಿತು. ಶಾಮೆತ್ತುಗೆ ನಂಬಿಕೆ ಬರಲಿಲ್ಲ. ತನ್ನ ಬಳಿ ಹುಲಿ ಹೇಳಿರಬಹುದಾದ ಗುಟ್ಟನ್ನು ಹಂಚಿಕೊಳ್ಳುತ್ತಿಲ್ಲ ಎಂದು ಕೋಪ ಬಂತು. 'ಹುಲಿ ಹೇಳಿದ್ದು ನನಗೆ ಹೇಳುತ್ತಿಲ್ಲ ಹೌದಲ್ಲಾ. ಇನ್ನು ನೀನು ನನ್ನ ಗೆಳೆಯನೇ ಅಲ್ಲ. ನಡೆಯಾಚೆ' ಎನ್ನತ್ತಾ ತಾನೇ ದೂರ ಸರಿಯಿತು. ಹುಲಿ ಮರೆಯಲ್ಲಿ ನಿಂತು ಇವುಗಳ ದ್ವೇಷ ಹೆಚ್ಚಾಗುವುದು ನೋಡಿ ತನ್ನ 'ಮಿತ್ರ ಭೇದ' ಉಪಾಯ ಫಲಿಸಿದ್ದಕ್ಕೆ ಸಂತೋಷಗೊಂಡಿತು. ರಾಮೆತ್ತು ಶಾಮೆತ್ತು ಈಗ ಒಂದನ್ನೊಂದು ದ್ವೇಷ ಮಾಡ ತೊಡಗಿದವು.

ಇದಾದ ಸ್ವಲ್ಪವೇ ದಿನಗಳಲ್ಲಿ ಹುಲಿ ರಾಮೆತ್ತುವಿನ ಮೇಲೆ ಆಕ್ರಮಣ ಮಾಡಿ ಹೊತ್ತೊಯ್ದು ತಿಂದುಬಿಟ್ಟಿತು. ಶಾಮೆತ್ತು ಅದನ್ನು ನೋಡಿಯೂ ಸಹಾಯಕ್ಕೆ ಬರಲೇ ಇಲ್ಲ. ಯಾಕೆಂದರೆ ಅವೆರಡೂ ಈಗ ಶತ್ರುಗಳಾಗಿದ್ದವಲ್ಲ! ಮರುದಿನ ಮತ್ತೆ ಹುಲಿ ಬಂತು. ಈಗ ಶಾಮೆತ್ತು ಅದರ ಬಾಯಿಗೆ ಬಿತ್ತು. ಕಾಪಾಡಲು ಯಾರೂ ಇದ್ದಿರಲಿಲ್ಲ. ಮುಂದೆ ಮಂದೆಯ ಒಂದೊಂದೇ ಜೀವ ಹುಲಿಗಾಹುತಿಯಾಗಿ ನಾಶವಾದವು. ಹುಲಿ ತೃಪ್ತಿಯಿಂದ ತಿಂದು ತೇಗಿ ಮತ್ತೆ ಕಾಡಿನೊಳಗೆ ಹೋಗಿಬಿಟ್ಟಿತು. ■



■ ಚಂದ್ರಿಕಾ, ಮತ್ತಿಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

# ಮಳೆಹಾಡು

ಟಪ್ ಟಪ ಟಪ್ ಟಪ
ಮಳೆಹನಿ ಬೀಳಲು
ತಟಪಟ ಕುಣಿದವು ಕಪ್ಪೆಗಳು
ವಟ ವಟ ರಾಗದಿ ಹಾಡನು ಹಾಡುತ
ಎಲ್ಲರ ಕರೆಯುತ ಕೇಳಿದವು

ಮಳೆ ಮಳೆ ಎಂದರೆ ನಮಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ಗಟ ಗಟ ನೀರನು ಕುಡಿಯುತ ನೆಲವು
ಹಾಡಿತು ಹಸಿರನು ಚಿಮ್ಮುತ್ತ
ಮಳೆ ಮಳೆ ಎಂದರೆ ನನಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ನೆನೆಯುತ ನಲಿಯುತ ಸ್ನಾನವ ಮಾಡುತ
ಮರ ಗಿಡ ನುಡಿದವು ಬಾಗುತ್ತ
ಮಳೆ ಮಳೆ ಎಂದರೆ ನಮಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ಮೈ ಮೇಲುದುರಿದ ಮಳೆಹನಿ ಕೊಡವುತ
ಹಸಿರೆಲೆ ಉಸುರಿತು ತಲೆಯನು ಕುಣಿಸಿ
ಮಳೆ ಮಳೆ ಎಂದರೆ ನನಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ಮಳೆ ನೀರಿನಲಿ ಮುಖವನು ತೊಳೆಯುತ
ಉಲಿಯಿತು ಹೂವು ಮೃದುವಾಗಿ
ಮಳೆ ಮಳೆ ಎಂದರೆ ನನಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ಹಸಿ ಮಣ್ಣೊಳಗಿಂದ ಮುಖವನು ತೂರುತ
ಮೈ ಮುರಿಯುತ ಎರೆಹುಳು ನುಲಿಯಿತು
ಮಳೆ ಮಳೆ ಎಂದರೆ ನನಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ನೆಲದೊಳು ಸುಮ್ಮನೆ ಮಲಗಿದ ಬೀಜವು
ಪಿಸುಗುಟ್ಟಿತು ಮೆಲ್ಲನೆ ಮೊಳೆಯುತ
ಮಳೆ ಮಳೆ ಎಂದರೆ ನನಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ನೇಗಿಲ ಹೂಡುತ ಹೊಲವನು ಉಳುತ
ರೈತರು ಹರುಷದಿ ಹೇಳಿದರು
ಮಳೆ ಮಳೆ ಎಂದರೆ ನಮಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ?

ಹೊಯ್ಯುವ ಮಳೆಯಲಿ ತೋಯುತ ಮಕ್ಕಳು
ಎಲ್ಲರ ಜೊತೆಯಲಿ ಹಾಡಿದರು
ಮಳೆ ಮಳೆ ಎಂದರೆ ನಮಗಿಷ್ಟ
ಮಳೆ ಬಂದರೆ ಮತ್ಯಾರಿಗೆ ಇಷ್ಟ? ■